ವಿಷಯ :- ನರೋಣ ಮತ್ತು ಕಮಲಾಪುರಗಳಲ್ಲಿ ಗುತ್ತಿಗೆ ಆಧಾರದ ಮೇಲೆ ವೈದ್ಯರನ್ನು ನೇಮಕಾತಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 771 (742)

ಶ್ರೀ ರೇವು ನಾಯಕ್ ಬೆಳಮಗಿ (ಕಮಲಾಪುರ) :- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ನರೋಣ ಮತ್ತು ಕಮಲಾಪುರಗಳಲ್ಲಿ ಗುತ್ತಿಗೆ ಆಧಾರದಲ್ಲಿ ವೈದ್ಯರನ್ನು ನೇಮಕ ಮಾಡಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ವೈದ್ಯರು ಸರಿಯಾದ ಸೇವೆಯಲ್ಲಿ ಹಾಜರಾಗುತ್ತಿಲ್ಲವೆಂದು ಇದರಿಂದ ಇಲ್ಲಿನ ಸಾರ್ವಜನಿಕರಿಗೆ ತೊಂದರೆಯಾಗಿರುವುದು ನಿಜವೇ ಹಾಗೂ ಈ ಹುದ್ದೆಗಳನ್ನು ಖಾಯಂಗೊಳಿಸುವ ಬಗ್ಗೆ ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಇ) ಗ್ರಾಮಾಂತರ ಪ್ರದೇಶದಲ್ಲಿ ಆರೋಗ್ಯ ಘಟಕ ಕೇಂದ್ರಗಳು ಇಲ್ಲದಿರುವ ಸ್ಥಳಗಳಲ್ಲಿ ಸದರಿ ಘಟಕ ಹಾಗೂ ಕೇಂದ್ರಗಳನ್ನು ಸ್ಥಾಪಿಸಿರುವ ಯೋಜನೆ ಸರ್ಕಾರದವರಿಗೆ ಇದೆಯೇ?

ಈ) ಹಾಗಿದ್ದಲ್ಲಿ ಯಾವ ಯಾವ ಸ್ಥಳಗಳು

ಡಾ. ಹೆಚ್. ಜಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :-

ಅ) ಬಂದಿದೆ.

ಆ) ಈ ವೈದ್ಯರು ಸರಿಯಾಗಿ ಸೇವೆಗೆ ಹಾಜರಾಗುತ್ತಿದ್ದು, ಸಾರ್ವಜನಿಕರಿಗೆ ತೊಂದರೆ ಆಗುತ್ತಿಲ್ಲ.

1995ನೇ ಸಾಲಿನಲ್ಲಿ ನೇಮಕವಾಗಿರುವ ಗುತ್ತಿಗೆ ವೈದ್ಯರನ್ನು ಖಾಯಂಗೊಳಿಸುವ ಬಗ್ಗೆ ಸರ್ಕಾರ ಇನ್ನೂ ತೀರ್ಮಾನಿಸಿಲ್ಲ.

ಇ) ದಿನಾಂಕ 1-4-87 ರಿಂದ ಪ್ರಾ. ಆ. ಘಟಕ ಮಂಜೂರು ಮಾಡಲಾಗುತ್ತಿಲ್ಲ. ಆದರೆ 96-97 ನೇ ಸಾಲಿನಲ್ಲಿ 50 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡುವ ಗುರಿ ನಿಗಧಿಪಡಿಸಿದೆ.

ಈ) ಸದ್ಯಕ್ಕೆ ಇನ್ನೂ ತೀರ್ಮಾನಿಸಿಲ್ಲ.